# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 128
ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 05-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ವೇತನ ಹೆಚ್ಚಳ, ಹಿಂಬಾಕಿ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸಾರಿಗೆ ನೌಕರರು ಅನಿರ್ಧಿಷ್ಟಾವಧಿ ಮುಷ್ಕರ ನಡೆಸಲು ಉದ್ದೇಶಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ವೇತನ ಪರಿಷ್ಕರಣೆ ಹಾಗೂ ಇತರೆ ಬೇಡಿಕೆಗಳ ಕುರಿತು ಕ.ರಾ.ರ.ಸಾ. ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯವರು ದಿನಾಂಕ:31.12.2024 ರಿಂದ ಮುಷ್ಕರ ಕೈಗೊಳ್ಳುವುದಾಗಿ ತಿಳಿಸಿ ನೀಡಿದ್ದ ಮುಷ್ಕರದ ನೋಟೀಸ್ ಸಂಬಂಧ ಬೇಡಿಕೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲಿಸುವುದಾಗಿ ತಿಳಿಸಿ, ಮುಷ್ಕರವನ್ನು ಕೈ ಬಿಡುವಂತೆ ಮನವರಿಕೆ ಮಾಡಿಕೊಟ್ಟಿದ್ದು, ಅದರಂತೆ ಜಂಟಿ ಕ್ರಿಯಾ ಸಮಿತಿಯವರು ಉದ್ದೇಶಿತ ಮುಷ್ಕರವನ್ನು ಹಿಂಪಡೆದಿರುತ್ತಾರೆ. |
| ಆ. | ಅವರ ಬೇಡಿಕೆಗಳು ಯಾವುವು; ಈ ಹಿಂದೆ ಮುಷ್ಕರ ಕೈಗೊಂಡಿದ್ದ ವೇಳೆ ಎಷ್ಟು ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಒಪ್ಪಿಗೆ ನೀಡಿತ್ತು; ಈ ಪೈಕಿ ಈಡೇರಿರುವ ಬೇಡಿಕೆಗಳು ಯಾವುವು | ಕ.ರಾ.ರ.ಸಾ.ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯವರ ಬೇಡಿಕೆಗಳ ವಿವರವನ್ನು **ಅನುಬಂಧ-ಅ** ದಲ್ಲಿ ನೀಡಲಾಗಿದೆ.<br><br>ಈ ಹಿಂದೆ ಮುಷ್ಕರ ಕೈಗೊಂಡಿದ್ದ ವೇಳೆ ಸಲ್ಲಿಸಿದ್ದ 9 ಬೇಡಿಕೆಗಳ ಸಂಬಂಧ ಬೇಡಿಕೆವಾರು ತೆಗೆದುಕೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-ಆ** ದಲ್ಲಿ ನೀಡಲಾಗಿದೆ. |
| ಇ. | ಸರ್ಕಾರ ಈ ಹಿಂದೆ ನೀಡಿದ್ದ ಭರವಸೆಯಂತೆ ಬೇಡಿಕೆಗಳನ್ನು ಈಡೇರಿಸದಿರಲು ಕಾರಣಗಳೇನು; ನೌಕರರ ಬೇಡಿಕೆಗಳನ್ನು ಈಡೇರಿಸುವ ಕುರಿತು ಸರ್ಕಾರದ ನಿಲುವೇನು; ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ; | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದವರು ಈ ಹಿಂದಿನ ಮುಷ್ಕರದ ಸಮಯದಲ್ಲಿ ಸಲ್ಲಿಸಿದ್ದ 9 ಬೇಡಿಕೆಗಳನ್ನು ಈಗಾಗಲೇ ಈಡೇರಿಸಲಾಗಿದೆ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರಿಮೆಂಟ್) ಪರಿಷ್ಕರಿಸಬೇಕಾಗಿರುತ್ತದೆ. ಅದರಂತೆ 2016ರಲ್ಲಿ ವೇತನ ಪರಿಷ್ಕರಣೆಯಾಗಿದ್ದು, ತದನಂತರ 2020ನೇ ವರ್ಷದಲ್ಲಿ ವೇತನ ಪರಿಷ್ಕರಣೆ ಮಾಡಬೇಕಾಗಿತ್ತು, ಆದರೆ, 06ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು ಸರ್ಕಾರವು ಆರ್ಥಿಕ ಅಂಶವನ್ನು ಪರಿಗಣಿಸಿ ತೀರ್ಮಾನಿಸುವ ಕುರಿತು ಭರವಸೆ ನೀಡಿದ್ದು, ಇದನ್ನು ಭಾಗಶಃ ಮಾರ್ಪಡಿಸಿ ನಿಗಮಗಳ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಮೂಲವೇತನವನ್ನು ಶೇ.15ರಷ್ಟು ಹೆಚ್ಚಿಸಿ ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023ರಿಂದ ಜಾರಿಗೊಳಿಸಲಾಗಿದೆ. ಆದರೆ, ಸದರಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಧಿಕಾರಿ/ನೌಕರರಿಗೆ ವೇತನವನ್ನು ಪಾವತಿಸಲು ಆಯವ್ಯಯದಲ್ಲಿ **ಯಾವುದೇ ಅನುದಾನವನ್ನು ಮೀಸಲಿರಿಸಿರಲಿಲ್ಲ** ಹಾಗೂ ನಿಗಮಗಳಿಗೆ **ಅನುದಾನ ಬಿಡುಗಡೆ ಮಾಡಿರಲಿಲ್ಲ**. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಈ. | ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಗೊಂಡ ನಂತರ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿ ವಿವರ ನೀಡುವುದು ? | ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಗೆ ಬಂದ ದಿನಾಂಕ:11.06.2023ರಿಂದ ಫೆಬ್ರವರಿ-25ರವರೆಗೆ ನಾಲ್ಕು ಸಾರಿಗೆ ನಿಗಮಗಳಿಗೆ ಬಿಡುಗಡೆಗೊಳಿಸಿರುವ ಅನುದಾನದ ವಿವರ ಕೆಳಕಂಡಂತಿದೆ:- |

**(ರೂ.ಲಕ್ಷಗಳಲ್ಲಿ)**

| ಸಂಸ್ಥೆ | ಬಿಡುಗಡೆ ಮಾಡಿರುವ ಅನುದಾನ (ಜೂನ್-23ರಿಂದ ಫೆಬ್ರವರಿ-25 ರವರೆಗೆ) |
|---|---|
| ಕ.ರಾ.ರ.ಸಾ.ನಿಗಮ | 295823.49 |
| ಬೆಂ.ಮ.ಸಾ.ಸಂಸ್ಥೆ | 134220.24 |
| ವಾ.ಕ.ರ.ಸಾ.ಸಂಸ್ಥೆ | 192172.52 |
| ಕ.ಕ.ರ.ಸಾ.ನಿಗಮ | 157467.01 |
| ಒಟ್ಟು | **779683.26** |

ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಕಳೆದ 05 ವರ್ಷಗಳಲ್ಲಿ ಅನುಭವಿಸಿದ ಲಾಭ/ನಷ್ಟದ ವಿವರ ಕೆಳಕಂಡಂತಿದೆ:-

**(ರೂ.ಕೋಟಿಗಳಲ್ಲಿ)**

| ಕ.ರಾ.ರ.ಸಾ.ನಿಗಮ | | | |
|---|---|---|---|
| **ವರ್ಷ** | **ಆದಾಯ** | **ವೆಚ್ಚ** | **ನಷ್ಟ** |
| 2019-20 | 3791.00 | 3948.56 | 157.56 |
| 2020-21 | 2271.92 | 2853.07 | 581.15 |
| 2021-22 | 2859.09 | 3282.40 | 423.31 |
| 2022-23 | 4573.68 | 4616.57 | 42.89 (ಸಬ್ಸಿಡಿ-555.00) |
| 2023-24 | 4544.41 | 4839.84 | 295.43 |
| **ಒಟ್ಟು** | **18040.10** | **19540.44** | **1500.34** |

| ಬೆಂ.ಮ.ಸಾ.ಸಂಸ್ಥೆ | | | |
|---|---|---|---|
| **ವರ್ಷ** | **ಆದಾಯ** | **ವೆಚ್ಚ** | **ನಷ್ಟ** |
| 2019-20 | 2119.96 | 2669.30 | 549.34 |
| 2020-21 | 1853.05 | 2017.25 | 164.20 |
| 2021-22 | 2115.12 | 2293.37 | 178.25 |
| 2022-23 | 2937.66 | 3015.04 | 77.38 (ಸಬ್ಸಿಡಿ-920.00) |
| 2023-24 | 2613.80 | 3189.25 | 575.45 |
| ಒಟ್ಟು | **11639.59** | **13184.21** | **1544.62** |

| ವಾ.ಕ.ರ.ಸಾ.ಸಂಸ್ಥೆ | | | |
|---|---|---|---|
| **ವರ್ಷ** | **ಆದಾಯ** | **ವೆಚ್ಚ** | **ನಷ್ಟ** |
| 2019-20 | 1955.41 | 2141.87 | 186.46 |
| 2020-21 | 1282.47 | 1671.55 | 389.08 |
| 2021-22 | 1471.61 | 1933.68 | 462.07 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | (see below) |

| | | | |
|---|---|---|---|
| 2022-23 | 2874.46 | 2900.95 | 26.49 (ಸಬ್ಸಿಡಿ-720.00) |
| 2023-24 | 2372.81 | 2695.29 | 322.48 |
| **ಒಟ್ಟು** | **9956.76** | **11343.34** | **1386.58** |

**ಕ.ಕ.ರ.ಸಾ.ನಿಗಮ**

| ವರ್ಷ | ಆದಾಯ | ವೆಚ್ಚ | ನಷ್ಟ |
|---|---|---|---|
| 2019-20 | 1837.19 | 1926.46 | 89.27 |
| 2020-21 | 1281.41 | 1467.86 | 186.45 |
| 2021-22 | 1467.90 | 1693.72 | 225.82 |
| 2022-23 | 2239.98 | 2354.96 | 114.98 (ಸಬ್ಸಿಡಿ-205.00) |
| 2023-24 | 2291.85 | 2452.97 | 161.12 |
| **ಒಟ್ಟು** | **9118.33** | **9895.97** | **777.64** |

ಸಂಖ್ಯೆ: ಟಿಡಿ 08 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-ಅ

**::ಬೇಡಿಕೆಗಳು::**

1. 31.12.2023 ರಂದು ಇರುವ ಮೂಲ ವೇತನಕ್ಕೆ ಶೇ. 25% ರಷ್ಟು ಹೆಚ್ಚಳ ಮಾಡಿ ಶೇ. 31 ತುಟ್ಟಿಭತ್ಯೆ ವಿಲೀನಗೊಳಿಸಿ ವೇತನ ಶ್ರೇಣಿಗಳನ್ನು ಸಿದ್ಧಪಡಿಸತಕ್ಕದ್ದು, ಇಂಕ್ರಿಮೆಂಟ್ ದರ ಎಲ್ಲಾ ಹಂತಗಳಲ್ಲೂ ಮೂಲ ವೇತನದ ಶೇಕಡ 4% ಇರತಕ್ಕದು. 01.01.2020 ರಿಂದ ಅಗಿರುವ ಶೇಕಡ 15% ವೇತನ ಹೆಚ್ಚಳದ 38 ತಿಂಗಳ ಬಾಕಿ ಹಣ ವಿಳಂಬವಿಲ್ಲದೆ ಪಾವತಿಸಬೇಕು. 01.01.2020 ರಿಂದ 28.02.2023 ರ ಅವಧಿಯಲ್ಲಿ ಸಂಸ್ಥೆಯ ಸೇವೆಯಿಂದ ವಿಮುಕ್ತಿ ಯಾಗಿರುವ ಎಲ್ಲಾ ನೌಕರರಿಗೆ ದಿನಾಂಕ: 27.06.2024 ರ ಸುತ್ತೋಲೆ ಕೂಡಲೇ ಜಾರಿಗೊಳಿಸಬೇಕು.
2. ಆಯ್ಕೆ ಶ್ರೇಣಿ (Selection grade) ಹಾಗೂ ಉನ್ನತ ಶ್ರೇಣಿ (higher grade) ಗಳ ವೇತನ ಶ್ರೇಣಿಯನ್ನು ಸಹ ಮೇಲೆ ತಿಳಿಸಿರುವ ರೀತಿಯಲ್ಲಿಯೇ ಸಿದ್ಧಪಡಿಸತಕ್ಕದ್ದು. ಆಯ್ಕೆ ಶ್ರೇಣಿಯ ವಾರ್ಷಿಕ ವೇತನ ಬಡ್ತಿ ಹಾಗೂ ಉನ್ನತ ಶ್ರೇಣಿಗಳ ವಾರ್ಷಿಕ ವೇತನ ಬಡ್ತಿಯು ಆಯಾಯ ವೇತನ ಶ್ರೇಣಿಯ ಮೂಲವೇತನದ ಶೇಕಡ 4% ಇರತಕ್ಕದ್ದು. ಆಯ್ಕೆ ಶ್ರೇಣಿ ಬಡ್ತಿಯನ್ನು ಸೇವಾವಧಿಯ ಪ್ರತಿ ಹತ್ತು ವರ್ಷಕ್ಕೊಮ್ಮೆ ನೀಡಬೇಕು ಯಾವುದೇ ಸಂದರ್ಭದಲ್ಲಿಯೂ ಆಯ್ಕೆ ಶ್ರೇಣಿ/ಉನ್ನತ ಶ್ರೇಣಿಯ ವಾರ್ಷಿಕ ವೇತನ ಬಡ್ತಿಯ ಸಾಮಾನ್ಯ ಶ್ರೇಣಿಯ ಕೊನೆ ಹಂತದ ವಾರ್ಷಿಕ ವೇತನ ಬಡ್ತಿಯ ಮೊತ್ತಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರತಕ್ಕದ್ದು.
3. ಜಂಟಿ ಕ್ರಿಯಾ ಸಮಿತಿ ವತಿಯಿಂದ ದಿನಾಂಕ:08.08.2023 ರಂದು ಸಲ್ಲಿಸಿದ್ದ ಬೇಡಿಕೆ ಪಟ್ಟಿಯಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಈ ಕೆಳಕಂಡ ಎಲ್ಲಾ ಬೇಡಿಕೆಗಳನ್ನು ಚರ್ಚಿಸಿ ಇತ್ಯರ್ಥ ಪಡಿಸಬೇಕು.

i) <u>**ವಿವಿದ ಭತ್ಯೆಗಳ ಹೆಚ್ಚಳ:**</u>

ಚಾಲಕರು, ನಿರ್ವಾಹಕರು, ತಾಂತ್ರಿಕ ಹಾಗೂ ಆಡಳಿತ ಸಿಬಂದ್ದಿಗಳಿಗೆ ಇತರೆ ಎಲ್ಲಾ ನೌಕರರಿಗೂ ಹಾಲಿ ಇರುವ ಬಾಟ, ಮಾಸಿಕ/ದೈನಂದಿನ (ಕ್ಯಾಷ್,ರೀಪಾಸ್ಟ್,ಬಟ್ಟೆತೊಳೆಯುವ, ರಾತ್ರಿ ಪಾಳಿ,ಪ್ರೋತ್ಸಾಹ ಭತ್ಯೆ ಮತ್ತಿತರ ಭತ್ಯೆಗಳು)ಭತ್ಯೆಗಳನ್ನು 5 ಪಟ್ಟು ಹೆಚ್ಚಿಸಬೇಕು. ಹೊಲಿಗೆ ಭತ್ಯೆ, ಶೂ,ಜರ್ಸಿ,ರೈನ್ಕೋಟ್ ಇತ್ಯಾದಿಗಳಿಗೆ ಕೊಡಲಾಗುವ ಮೊತ್ತವನ್ನು ಮೂರು ಪಟ್ಟು ಹೆಚ್ಚಿಸಬೇಕು. ಎಲ್ಲಾ ನಿರ್ವಾಹಕರಿಗೂ ಕ್ಯಾಷಿಯರ್‌ಗಳಿಗೆ ಸಮಾನವಾದ ಕ್ಯಾಷ್ ಅಲೋಯೆನ್ಸ್ ನೀಡಬೇಕು.

ii) <u>**ವೈದ್ಯಕೀಯ ಸೌಲಭ್ಯ :**</u>

a. ಎಲ್ಲಾ ನೌಕರರಿಗೂ ಪ್ರತಿ ತಿಂಗಳು ಹೊರ ರೋಗಿ ಚಿಕಿತ್ಸೆ ವೆಚ್ಚಕ್ಕಾಗಿ ₹2000/- ನೀಡಬೇಕು.

b. ಎಲ್ಲಾ ನೌಕರರಿಗೂ ಉಚಿತ ಔಷಧ ಪೂರೈಸಬೇಕು.

c. ಇ.ಎಸ್.ಐ ಮಾದರಿಯಲ್ಲಿ ಆಡಳಿತ ವರ್ಗದವರಿಂದ ನೌಕರರ ಮೂಲ ವೇತನದ ಶೇ.4.5 ಹಾಗೂ ಕಾರ್ಮಿಕ ರಿಂದ ಶೇ.0.5 ವಂತಿಕೆ ಸಂಗ್ರಹಿಸಿ ಟ್ರಸ್ಟ್ ರಚಿಸಿ ಈ ಮೂಲಕ ಸಾರಿಗೆ ನೌಕರರಿಗೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ (ನಗದುರಹಿತ) ಚಿಕಿತ್ಸೆ ನೀಡುವಂತೆ ಯೋಜನೆ ರೂಪಿಸಬೇಕು.

d. ಮೇಲಂಕ್ಕಡ ಈ ಸೌಲಭ್ಯಗಳನ್ನು ನಿವೃತ್ತ ಕಾರ್ಮಿಕರಿಗೆ ಅವರ ಪತಿ/ಪತ್ನಿ ಹಾಗೂ ಮಕ್ಕಳಿಗೆ ನೀಡತಕ್ಕದ್ದು.

ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ
ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ
ಬೆಂಗಳೂರು – 560 027

iii) 2023ರ ಅವಧಿಗೆ ನೌಕರರಿಂದ ಕಡಿತಗೊಳಿಸಲಾಗಿದ್ದ ಅಪಘಾತ ವಿಮೆ ಪ್ರೀಮಿಯಂ ಹಣವನ್ನು ಮರು ಪಾವತಿಸಬೇಕು. 2024ರ ಆವಧಿಗೆ ಅಪಘಾತ ವಿಮೆ ಪ್ರೀಮಿಯಂನ್ನು ಆಡಳಿತ ವರ್ಗವೇ ಸಂಪೂರ್ಣವಾಗಿ ಭರಿಸತಕ್ಕದ್ದು.ಅಪಘಾತ/ಸಹಜ ಕಾರಣಕ್ಕಾಗಿ ಸೇವಾವಧಿಯಲ್ಲಿ ಮೃತಪಟ್ಟ ಸಾರಿಗೆ ನೌಕರರ ಕುಟುಂಬಕ್ಕೆ ಕೆ..ಎಸ್.ಆರ್.ಟಿ.ಸಿಯಲ್ಲಿ ಜಾರಿಯಲ್ಲಿರುವಂತೆ ಅನುಕ್ರಮವಾಗಿ ಒಂದು ಕೋಟಿ/ 10 ಲಕ್ಷ ರೂಪಾಯಿಗಳ ಪರಿಹಾರ ಸೌಲಭ್ಯವನ್ನು ಎಲ್ಲಾ ನಿಗಮಗಳಲ್ಲಿ ಜಾರಿಗೊಳಿಸಬೇಕು.

iv) ಫಾರಂ-4 ನ್ನು Motor Transport Workers Act 1961 ಹಾಗೂ 16.02.1978ರ ಸಪ್ಲಿಮೆಂಟರಿ ಒಪ್ಪಂದದ ಪ್ರಕಾರ ರಚಿಸಬೇಕು. ಹೆಚ್ಚುವರಿ ಕೆಲಸದ ಅವಧಿಗೆ ಓವರ್ ಟೈಮ್ ಭತ್ಯೆ ನೀಡಬೇಕು.

v) ಆಡಳಿತ ವರ್ಗ ಏಕಪಕ್ಷೀಯ ನಿರ್ಧಾರಗಳ ಮೂಲಕ ಕಾರ್ಮಿಕರ ಸೇವಾ ಪರಿಸ್ಥಿತಿಗಳ ಬದಲಾವಣೆಯನ್ನು ಜಾರಿಗೊಳಿಸುವುದನ್ನು ನಿಲ್ಲಿಸಬೇಕು. ಯಾವುದೇ ಸೇವಾ ಷರತ್ತು/ಪರಿಸ್ಥಿತಿಗಳ ಬದಲಾವಣೆಯನ್ನು ಕಾರ್ಮಿಕ ಸಂಘ ಜಂಟಿಕ್ರಿಯಾ ಸಮಿತಿ ಜೊತೆ ಚರ್ಚಿಸಿ ಉಭಯ ಪಕ್ಷಗಳಿಗೂ ಸಮ್ಮತವಾದ ಆಂಶಗಳನ್ನು ಜಾರಿಗೊಳಿಸಬೇಕು. APRTC ಯಲ್ಲಿ ಜಾರಿಯಲ್ಲಿದಂತೆ ಶಿಸ್ತುಕ್ರಮಗಳ ಸರಳೀಕರಣಗೊಳಿಸಬೇಕು.

vi) ಎಲ್ಲಾ ನೌಕರರಿಗೂ ಪಾಳಿ ವ್ಯವಸ್ಥೆ ಜಾರಿ ಮಾಡಬೇಕು. ಹಾಗೂ ರಿಯಾಯಿತಿ ದರದಲ್ಲಿ ಕ್ಯಾಂಟೀನ್ ಸೌಲಭ್ಯ ನೀಡಬೇಕು.ಮಹಿಳಾ ನೌಕರರಿಗೆ ಘಟಕ/ಬಸ್ ನಿಲ್ದಾಣಗಳಲ್ಲಿ/ಟರ್ಮಿನಲ್ಗಳಲ್ಲಿ ವಿಶ್ರಾಂತಿ ಕೊಠಡಿ, ಶೌಚಾಲಯಗಳ ವ್ಯವಸ್ಥೆ, ಕುಡಿಯುವ ನೀರು ಹಾಗೂ ಘಟಕಗಳಲ್ಲಿ ಶಿಶುಪಾಲನಾ ಕೇಂದ್ರ ವ್ಯವಸ್ಥೆ ಮಾಡಿಕೊಡಬೇಕು.ಮಹಿಳಾ ನೌಕರರಿಗೆ ಅವರ ಆಯ್ಕೆಯ ಪ್ರಕಾರ ಉತ್ತಮ ಗುಣಮಟ್ಟದ ಸೀರೆ ಅಥವಾ ಡ್ರೆಸ್ ಮೆಟೀರಿಯಲ್ ಕೊಡತಕ್ಕದ್ದು.ಮಹಿಳಾ ನೌಕರರಿಗೆ ಯಾವುದೇ ಸಂದರ್ಭದಲ್ಲಿಯೂ 8 ಗಂಟೆ ಗಿಂತ ಅಧಿಕ ಕೆಲಸದಲ್ಲಿ ಕರ್ತವ್ಯ ನಿಯೋಜಿಸಬಾರದು.

vii) ಭವಿಷ್ಯ ನಿಧಿಯ ಪೆನ್ಷನ್ ಬದಲು ಸಂಸ್ಥೆಯೇ ತನ್ನ ಎಲ್ಲಾ ನಿವೃತ್ತ ನೌಕರರಿಗೂ ಸೂಕ್ತವಾದ, ತುಟ್ಟಿಭತ್ಯೆಗೆ ಲಗತ್ತಾದ ಪೆನ್ಷನ್ ಯೋಜನೆಯನ್ನು ಜಾರಿಗೊಳಿಸಬೇಕು. ಗ್ರಾಚ್ಯುಟಿ ಸಂಬಂದ ಸಂಖ್ಯೆ 1274 ಸುತ್ತೋಲೆಯನ್ನು ರದ್ದುಪಡಿಸಿ ಕೈಗಾರಿಕಾ ಒಪ್ಪಂದಗಳ ಪ್ರಕಾರ ಎಲ್ಲಾ ಕಾರ್ಮಿಕರಿಗೂ ಗ್ರಾಚ್ಯುಟಿ ಪಾವತಿಸತಕ್ಕದ್ದು. ನಾಲ್ಕೂ ನಿಗಮಗಳಲ್ಲೂ ಇರುವ ಎಲ್ಲಾ ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.

12. ವಿಶೇಷ ಸಮಿತಿಗಳ ಶಿಫಾರಸಿನಂತೆ ಪ್ರಯಾಣ ದರ ನಿರ್ಧರಿಸಲು ತಜ್ಞರ ಸಮಿತಿ ರಚಿಸಿವುದು. (ಈ ಸೂಚನೆಯನ್ನು ಸರ್ಕಾರ ಒಪ್ಪದಿದ್ದ ಪಕ್ಷದಲ್ಲಿ ಸಾರಿಗೆ ನಿಗಮಗಳ ಎಲ್ಲಾ ವೆಚ್ಚವನ್ನು ಸರ್ಕಾರವೇ ಭರಿಸಬೇಕು).

**ಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ**
**ಕರಾರಸಾ ಸಂಸ್ಥೆ, ಕೇಂದ್ರ ಕಛೇರಿ**
**ಬೆಂಗಳೂರು – 560 027**

## ಸಾರಿಗೆ ಸಂಸ್ಥೆಗಳ ನೌಕರರ 9 ಬೇಡಿಕೆಗಳ ಕುರಿತು ತೆಗೆದುಕೊಂಡಿರುವ ಕ್ರಮ

| ಕ್ರ.ಸಂ | ಬೇಡಿಕೆ | ಷರಾ |
|---|---|---|
| 1 | ಸಾರಿಗೆ ಸಂಸ್ಥೆಯ ನೌಕರರಿಗೆ ಆರೋಗ್ಯ ಭಾಗ್ಯ/ ಜ್ಯೋತಿ ಸಂಜೀವಿನಿ ವಿಮಾ ಯೋಜನೆಯನ್ನು ಅಳವಡಿಸುವ ಕುರಿತು. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು/ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲು ನೂತನ **"ಕೆ.ಎಸ್.ಆರ್.ಟಿ.ಸಿ ಆರೋಗ್ಯ"** ಯೋಜನೆಯನ್ನು ದಿನಾಂಕ:06.01.2025 ರಿಂದ ಜಾರಿಗೆ ತರಲಾಗಿದೆ.<br><br>ತತ್ಸಂಬಂಧ 350 ಕ್ಕೂ ಹೆಚ್ಚು ಸರ್ಕಾರದ ಸ್ವಾಯತ್ತ ಹಾಗೂ ಖಾಸಗಿ ಆಸ್ಪತ್ರೆಗಳೊಂದಿಗೆ ಆಸ್ಪತ್ರೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.<br><br>ಈ ಯೋಜನೆಯಡಿ 33040 ನೌಕರರು ಹಾಗೂ 1,07,210 ಅವಲಂಬಿತ ಕುಟುಂಬ ಸದಸ್ಯರು ಯೋಜನೆಯ ಫಲಾನುಭವಿಗಳಾಗಿರುತ್ತಾರೆ. |
| 2 | ಕೋವಿಡ್-19 ಸೋಂಕು ತಗುಲಿದ ನಿಗಮದ ನೌಕರರು ಮರಣ ಹೊಂದಿದ ಸಂದರ್ಭದಲ್ಲಿ ಅವರ ಕುಟುಂಬಗಳಿಗೆ ಸರ್ಕಾರಿ ನೌಕರರಿಗೆ ನೀಡಿದಂತೆ ರೂ.30 ಲಕ್ಷ ಪರಿಹಾರ ನೀಡುವ ಕುರಿತು. | ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತಪಟ್ಟ ನಿಗಮದ ನೌಕರರ ಪೈಕಿ 07 ನೌಕರರ ಕುಟುಂಬದವರಿಗೆ ದಿನಾಂಕ: 26-02-2021 ರಂದು ಸನ್ಮಾನ್ಯ ಮುಖ್ಯಮಂತ್ರಿ ರವರಿಂದ ತಲಾ ರೂ.30 ಲಕ್ಷಗಳ ಚೆಕ್‌ಗಳನ್ನು ನೀಡಲಾಗಿದೆ.<br><br>ಉಳಿದ ಪ್ರಕರಣಗಳಲ್ಲಿ ಹಣ ಮಂಜೂರು ಮಾಡಲು ಕೋರಿ ಈಗಾಗಲೇ ನಾಲ್ಕು ಬಾರಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. |
| 3 | ನಿಗಮದಲ್ಲಿ ಹೆಚ್.ಆರ್.ಎಂ.ಎಸ್ (ಮಾನವ ಸಂಪನ್ಮೂಲ) ವ್ಯವಸ್ಥೆಯನ್ನು ಜಾರಿಗೊಳಿಸುವ ಕುರಿತು. | ನಿಗಮದಲ್ಲಿ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯನ್ನು (HRMS) CEG ಯವರ ಸಹಯೋಗದಲ್ಲಿ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆ.<br>ಸೇವಾ ಮಾಹಿತಿ, ಹಾಜರಾತಿ ಮತ್ತು ರಜೆ ನಿರ್ವಹಣೆ ಹಾಗೂ ವೇತನ ಪಾವತಿಯನ್ನು (HRMS) ತಂತ್ರಾಂಶದ ಮೂಖಾಂತರವೇ ನಿರ್ವಹಿಸಲಾಗುತ್ತಿದೆ. |
| 4 | ಸಿಬ್ಬಂದಿಯು ಕರ್ತವ್ಯ ನಿರ್ವಹಿಸಿದ ಸಂದರ್ಭದಲ್ಲಿ ಭತ್ಯೆಯನ್ನು (ಬಾಟಾ) ನೀಡುವ ಕುರಿತು. | ನಿಗಮದ ಸಿಬ್ಬಂದಿಗಳು ದಿನದ ಕರ್ತವ್ಯದ ಸಲುವಾಗಿ ಅರ್ಹ ವಿವಿಧ ಭತ್ಯೆಗಳು ಮತ್ತು ಬಾಟಾಗಳು ಹಾಗೂ ಮಾಸಿಕ ಭತ್ಯೆಗಳನ್ನು ದಿನಾಂಕ.01.03.2021 ರಿಂದ ಜಾರಿಗೆ ಬರುವಂತೆ ನೀಡಲು ಸೂಚಿಸಿ ಆದೇಶವನ್ನು ಈಗಾಗಲೇ ಹೊರಡಿಸಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ. |
| 5 | ಘಟಕದ ವ್ಯಾಪ್ತಿಯಲ್ಲಿ ನೌಕರರಿಗೆ ಕಿರುಕುಳ ತಪ್ಪಿಸಲು ಸೂಕ್ತ ಆಡಳಿತ ವ್ಯವಸ್ಥೆ ಜಾರಿಗೆ ತರುವ ಕುರಿತು. | 1. ಚಾಲಕ ನಿರ್ವಾಹಕರಿಗೆ ಅನುಸೂಚಿಗಳ ನಿಗಧಿ ವಿಚಾರದಲ್ಲಿ ಏಕರೀತಿಯ ಅಂಶಗಳನ್ನು ಅನುಸರಿಸಲು ಕೌನ್ಸಿಲಿಂಗ್ ಪದ್ಧತಿಯನ್ನು ಜಾರಿಗೆ ತರಲಾಗಿದೆ.<br>2. ನೌಕರರಿಗೆ ರಜಾ ಮಂಜೂರಾತಿ ಕುರಿತಂತೆ ಪಾರದರ್ಶಕ ಮತ್ತು ತಂತ್ರಾಂಶ ಆಧಾರಿತ ರಜಾ ನಿರ್ವಹಣಾ ವ್ಯವಸ್ಥೆ ಜಾರಿಗೆ ತರಲಾಗಿದೆ. ಈ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶನಗಳನ್ನು ನೀಡಿದ್ದು, ಅದರಂತೆ ಕ್ರಮ |

| | | |
|---|---|---|
| | | ಜಾರಿಯಲ್ಲಿದೆ.<br>3. ನೌಕರರ ಸೇವಾ ಸಂಬಂಧಿತ ಕುಂದುಕೊರತೆ/ ಸಮಸ್ಯೆಗಳನ್ನು ಪರಿಶೀಲಿಸಿ, ಬಗೆಹರಿಸುವ ಪದ್ಧತಿ ಜಾರಿಯಲ್ಲಿದ್ದು, ಅದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.<br>ಅದರಂತೆ, ವಿಭಾಗಗಳ ಅಧಿಕಾರಿಗಳ ತಂಡವು ಘಟಕಗಳಿಗೆ ಭೇಟಿ ನೀಡಿ ನೌಕರರ ಕುಂದುಕೊರತೆಗಳನ್ನು ಪಡೆದು, ಪರಿಶೀಲಿಸಿ ಬಗೆಹರಿಸುವ ಪದ್ಧತಿ ನಿರಂತರವಾಗಿ ನಡೆಯುತ್ತಿದೆ.<br>4. ತನಿಖಾ ಕಾರ್ಯದಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ತನಿಖಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ Body Camera ವನ್ನು ಬಳಸುವಂತೆ ನಿರ್ದೇಶನಗಳನ್ನು ದಿನಾಂಕ.03.02.2021 ರಂತೆ ನೀಡಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ<br>5. ತಂತ್ರಾಂಶ ಆಧಾರಿತ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಜಾರಿಗೆ ತರುವ ಉಪಕ್ರಮವನ್ನು (Grievance Redressal Mechanism) ಅಭಿವೃದ್ಧಿಪಡಿಸಿದ್ದು, ಜಾರಿಗೆ ತರುವ ಸಂಬಂಧ ಸುತ್ತೋಲೆ ಸಂಖ್ಯೆ:127/2021, ದಿನಾಂಕ:26.08.2021 ನ್ನು ಈಗಾಗಲೇ ಹೊರಡಿಸಲಾಗಿದೆ. |
| 6 | ಎನ್.ಐ.ಎನ್.ಸಿ (ನಾಟ್ ಇಶ್ಯೂಡ್ - ನಾಟ್ ಕಲೆಕ್ಟೆಡ್) ಪದ್ಧತಿಯನ್ನು ಪುನರ್ ಪರಿಶೀಲಿಸಿ ಸೂಕ್ತ ವ್ಯವಸ್ಥೆ ಅಳವಡಿಸಿಕೊಳ್ಳುವ ಕುರಿತು. | NINC (Not Issued Not Collected) ಪ್ರಕರಣಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಕುರಿತು ಪರಿಷ್ಕೃತ ನಿರ್ದೇಶನಗಳ ಆದೇಶವನ್ನು ದಿನಾಂಕ:-02.03.2021 ರಂದು ಹೊರಡಿಸಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ.<br><br>ಅಲ್ಲದೇ, ತನಿಖಾ ಕಾರ್ಯದಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ತನಿಖಾ ಸಿಬ್ಬಂದಿಗಳಿಗೆ ಕಡ್ಡಾಯವಾಗಿ Body Camera ಗಳನ್ನು ಧರಿಸಿ ವಾಹನಗಳನ್ನು ತನಿಖೆ ಮಾಡಲು ನಿರ್ದೇಶನಗಳನ್ನು ದಿನಾಂಕ.03.02.2021 ರಂತೆ ನೀಡಲಾಗಿದೆ ಮತ್ತು ಅದರಂತೆ ಕ್ರಮ ಜಾರಿಯಲ್ಲಿದೆ. |
| 7 | ಅಂತರ-ನಿಗಮ ವರ್ಗಾವಣೆ ಕುರಿತು. | "ಅಂತರ ನಿಗಮ ವರ್ಗಾವಣೆ ನೀತಿ" ಯನ್ನು ಜಾರಿಗೆ ತರುವ ಕುರಿತು ಸರ್ಕಾರವು ದಿನಾಂಕ: 09.03.2021 ರಂದು ಆದೇಶವನ್ನು ಹೊರಡಿಸಿದ್ದು, ಅದರನ್ವಯ 2021 ನೇ ಸಾಲಿನಲ್ಲಿ 2365 ನೌಕರರನ್ನು ಅಂತರ ನಿಗಮ ವರ್ಗಾವಣೆ ಮಾಡಲಾಗಿದೆ.<br><br>2022 ನೇ ಸಾಲಿನಲ್ಲಿ ಪರಸ್ಪರ ವರ್ಗಾವಣೆಯಡಿ 712 ನೌಕರರನ್ನು ಈಗಾಗಲೇ ವರ್ಗಾವಣೆ ಮಾಡಿದ್ದು, ಸಾಮಾನ್ಯ ಪ್ರಕರಣಗಳಲ್ಲಿ 1013 ನೌಕರುಗಳನ್ನು ವರ್ಗಾವಣೆ ಮಾಡಲಾಗಿದೆ.<br><br>2023 ನೇ ಸಾಲಿನಲ್ಲಿ 596 ಪರಸ್ಪರ ವರ್ಗಾವಣೆಯಡಿ ನೌಕರರನ್ನು ಈಗಾಗಲೇ ವರ್ಗಾವಣೆ ಮಾಡಿದ್ದು, ಸಾಮಾನ್ಯ |

| | | |
|---|---|---|
| | | ಪ್ರಕರಣಗಳಲ್ಲಿ 1252 ನೌಕರುಗಳನ್ನು ವರ್ಗಾವಣೆ ಮಾಡಲಾಗಿದೆ. |
| 8 | ತರಬೇತಿಯಲ್ಲಿರುವ ನೌಕರರನ್ನು ತರಬೇತಿ ಅವಧಿಯನ್ನು 02 ವರ್ಷದಿಂದ 01 ವರ್ಷಕ್ಕೆ ಇಳಿಸುವ ಕುರಿತು. | ದಿನಾಂಕ: 01.07.2021 ರಿಂದ ಜಾರಿಗೆ ಬರುವಂತೆ ನೌಕರರ ತರಬೇತಿ ಅವಧಿಯನ್ನು 01 ವರ್ಷಕ್ಕೆ ಇಳಿಸಲಾಗಿದೆ. |
| 9 | 06ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು ಸರ್ಕಾರವು ಆರ್ಥಿಕ ಅಂಶಗಳನ್ನು ಪರಿಗಣಿಸಿ ತೀರ್ಮಾನಿಸುವ ಕುರಿತು. | ದಿನಾಂಕ:31/12/2019 ರಂದು ಪಡೆಯುತ್ತಿದ್ದ ಮೂಲ ವೇತನವನ್ನು ಶೇಕಡ 15% ರಷ್ಟು ಹೆಚ್ಚಿಸಿ ದಿನಾಂಕ:01.03.2023 ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಲಾಗಿದೆ. |

ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ